# ನವಿಲುಗನ್ನಡಿ

- ಕಲಾತ್ಮಕ ಮುಖಪುಟದ ಅಕ್ಟೋಬರ್ ಸಂಚಿಕೆ ಗಮನ ಸೆಳೆಯಿತು. ವೈವಿಧ್ಯಮಯ ಕತೆ, ಕವಿತೆ, ಲೇಖನಗಳು ಆಕರ್ಷಿಸಿದವು. ಕನ್ನಡದ ಪ್ರಸಿದ್ಧ ಲೇಖಕರ ಚಿತ್ರಣವಿರುವ ಶೇಷನಾರಾಯಣ ಅವರ 'ಛಾಪಕನ ಛಾಪು' ಇಷ್ಟವಾಯಿತು. ಇದು ಶೇಷನಾರಾಯಣ ಅವರಿಗೆ 'ಮಯೂರ' ಸಲ್ಲಿಸಿದ ಉತ್ತಮ ನುಡಿನಮನ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**


- 'ನವಿಲುಗರಿ' ಅಂಕಣದಲ್ಲಿ 'ಛಾಪಕನ ಛಾಪು' ಅಂಕಣ ಬರಹಗಳ ಮರುಮುದ್ರಣ ಅಪೂರ್ವ ಓದಿಗೆ ಅವಕಾಶ ಮಾಡಿಕೊಟ್ಟಿದೆ. ಕತೆಗಾರ, ಮುದ್ರಕ, ಕರಡು ತಿದ್ದುವವರಾಗಿದ್ದ ಶೇಷನಾರಾಯಣ ಅವರ ಸ್ಮೃತಿ ಚಿತ್ರಣವನ್ನು ಅವರ ಅಂಕಣದ ಬರಹಗಳು ನಮ್ಮ ಗ್ರಹಿಕೆಗೆ ತರುತ್ತವೆ. ಕನ್ನಡ ಸಾಹಿತ್ಯ ಲೋಕದ ಅನೇಕ ಮಹನೀಯರ ಶ್ರೀಮಂತ ವ್ಯಕ್ತಿತ್ವವನ್ನು ಈ ನುಡಿಚಿತ್ರಗಳು ಮನದಟ್ಟುಮಾಡಿಕೊಟ್ಟವು. ಶೇಷನಾರಾಯಣ ಅವರ ಸರಳ, ಸಜ್ಜನಿಕೆಯ ವ್ಯಕ್ತಿತ್ವದ ಪರಿಚಯ ಕೂಡ ಅವರ ಬರವಣಿಗೆಯಿಂದಲೇ ನಮಗೆ ಆಗುತ್ತದೆ.

**ಶೂದ್ರ ಶ್ರೀನಿವಾಸ್, ಬೆಂಗಳೂರು**

- ಶೇಷನಾರಾಯಣ ಅವರ ಲೇಖನ 'ಛಾಪಕರ ಛಾಪು' ಹಿರಿಯ ಲೇಖಕರ ಬಗ್ಗೆ ಕುತೂಹಕಲರ ಸಂಗತಿಗಳನ್ನು ಉಣಬಡಿಸಿತು.

**ಎನ್. ರಾಘವನ್,**
**ಪ್ರಭಾ ಶಾಮಸುಂದರ್, ಬೆಂಗಳೂರು**

- ನಾಗ ಎಚ್. ಹುಬ್ಳಿ ಅವರ 'ಕಾಂಕೇ ಚಲೋ' ಮನಮಿಡಿಯುವ ಕತೆ. ಹಣ, ಪರಿಸ್ಥಿತಿ ಹಾಗೂ ಆತ್ಮಸಾಕ್ಷಿಯ ನಡುವೆ ಜೀಕುವ




ಕತೆ ಕೊನೆಯವರೆಗೂ ಕುತೂಹಲವನ್ನು ಉಳಿಸಿಕೊಂಡಿದೆ.

**ಎಲ್. ಗಿರಿಜಾರಾಜ್, ಬೆಂಗಳೂರು**

- ಯುವ ವಿದ್ವಾಂಸ ಎಸ್. ಕಾರ್ತಿಕ್ ಸಂದರ್ಶನ ಸೊಗಸಾಗಿದೆ. 'ನಮ್ಮ ಪ್ರಯತ್ನವನ್ನು ನಾವು ಕರ್ತವ್ಯ ಎಂದು ಮಾಡುತ್ತಿರಬೇಕು' ಎಂಬ ಮಾತು ಸಂಶೋಧನಾಸಕ್ತಿಯ ಕುರಿತ ಅವರ ತೀವ್ರ ತುಡಿತವನ್ನು ಬಿಂಬಿಸುತ್ತದೆ.

**ವೀಣಾ ಜೋಶಿ, ಬಾರ್ಕೂರು**

- ಜೆ.ವಿ. ಕಾರ್ಲೊ ಅನುವಾದಿಸಿದ ಹೆರ್ನಾಂಡೊ ಟೆಲೆಜ್ ಅವರ ಕತೆ 'ಬರೀ ನೊರೆ ಮಾತ್ರ' ಎಷ್ಟು ಬಾರಿ ಓದಿದರೂ ಹೊಸದೇ ಎನಿಸುತ್ತದೆ.

**ಎಚ್.ಎಸ್. ಸತ್ಯನಾರಾಯಣ ರಾವ್,**
**ಅರಕಲವಾಡಿ**

- 'ಅಪ್ಪನೆಂಬ ವೈರಿ' (ಮೂಲ: ಫ್ರ್ಯಾಂಕ್ ಓ'ಕಾನರ್, ಕನ್ನಡಕ್ಕೆ: ಬಸು ಬೇವಿನಗಿಡದ) ಕತೆ ಸರಳ ಭಾಷೆ, ಸೊಗಸಾದ ನಿರೂಪಣೆಯಿಂದ ಓದಿಸಿಕೊಂಡು ಹೋಗುತ್ತದೆ.

**ನಿರಂಜನ್, ಮೈಸೂರು**